ಮಾಡೋದು ಅಂದ್ರೆ ನನ್ನ ಶರೀರಕ್ಕೆ ಬೆಂಕಿ ಹಚ್ಚುವುದಲ್ಲ...'

'ನೋಡು, ನನ್ನ ಮಾತಿಗೆ ತಮಾಷೆ ಮಾಡ್ಬೇಡ, ಈಗಲಾದರೂ ಎಚ್ಚೆತ್ತುಕೋ'.

'ನನಗಿದು ಇಷ್ಟವಿಲ್ಲ!'

'ಹೆಚ್ಚು ಮಾತಾಡಬೇಡ, ಒಪ್ಪಿಕೊಂಡು ಬಿಡು, ಮತ್ತೆ ಎಚ್ಚರಿಕೆ ಕೊಡ್ತಿದ್ದೀನಿ'.

'ಮೊದಲು ನೀವು ನಿಮ್ಮ ದಯೆ ತೋರುವ ಮಾತನ್ನು ವಾಪಸ್ ತೆಗೆದುಕೊಳ್ಳಿ, ಆಮೇಲೆ ನೋಡೋಣ'.

'ನಾನೇನನ್ನೂ ವಾಪಸ್ ತಗೊಳ್ಳಲ್ಲ, ನೀನೇನು ಮಾಡ್ತೀಯೋ ಮಾಡು. ನೋಡು, ನೀನು ನನಗೆ ಹೆಚ್ಚು ಸಿಟ್ಟು ಬರಿಸಬೇಡ. ನನಗೆ ಮೊದಲೇ ಸಿಟ್ಟು ಬರ್‍ತಿದೆ'.

'ಇದರಲ್ಲಿ ಸಿಟ್ಟು ಬರಿಸುವಂಥದ್ದು ಏನಿದೆ? ನನಗೇನು ಬೇಕು, ಏನು ಬೇಡ ಅನ್ನೋದನ್ನು ನಾನು ನಿರ್ಧರಿಸುತ್ತೇನೋ, ನೀವು ನಿರ್ಧರಿಸುತ್ತೀರೋ?'

'ನೀನೇ ನಿನ್ನ ಬಗ್ಗೆ ತೀರ್ಮಾನಿಸುತ್ತೀಯಾ? ಸರ್ಕಾರ ನಿನ್ನ ಬಗ್ಗೆ ಏನೂ ತೀರ್ಮಾನಿಸುವುದಿಲ್ವ? ನೀನು ಎಷ್ಟು ಟ್ಯಾಕ್ಸ್ ಕಟ್ಟಬೇಕು ಅನ್ನೋದನ್ನು ನೀನೇ ನಿರ್ಧರಿಸುತ್ತೀಯಾ? ಸರ್ಕಾರ ನಿರ್ಧರಿಸಿದರೆ, ಸರಿ; ನಾನು ನಿರ್ಧರಿಸಿದರೆ ತಪ್ಪು? ನಾನು ದಯಪಾಲಿಸುವುದನ್ನು ಸರ್ಕಾರ ನಿರ್ಧರಿಸಲ್ಲ. ಇಪ್ಪತ್ತನೇ ಶತಮಾನದಲ್ಲಿ ಹುಟ್ಟಿ ಇಪ್ಪತ್ತೊಂದನೇ ಶತಮಾನಕ್ಕೆ ಬಂದವರೇ ಹೀಗೆ, ಏನೇನೋ ಮಾತಾಡಿಬಿಡ್ತೀರ. ದೇವರ ಬಗ್ಗೆಯೂ ನಿಮಗೆ ಸಂಕೋಚವಿಲ್ಲ!'

'ನೀವು ದೇವರಾಗಿದ್ದರೆ ನಿಮ್ಮ ಐಡೆಂಟಿಟಿ ಕಾರ್ಡ್ ತೋರ್‍ಸಿ!'

'ಐಡೆಂಟಿಟಿ ಕಾರ್ಡ್? ಈಗ ದೇವರು ಮನುಷ್ಯರಿಗೆ ಐಡೆಂಟಿಟಿ ಕಾರ್ಡ್ ತೋರಿಸಬೇಕಾ? ಈಗ ನಿನ್ನ ದುಷ್ಟತನ ಎಲ್ಲೆ ಮೀರಿತು'.

'ಯಾಕೆ ಎಲ್ಲೆ ಮೀರ್‍ತು? ಇವತ್ತು ಇಲ್ಲಿ ಎಲ್ಲರ ಬಳಿಯೂ ಐಡೆಂಟಿಟಿ ಕಾರ್ಡ್ ಇರಲೇಬೇಕು. ಅದನ್ನು ಯಾವಾಗ ಬೇಕಾದರೂ ಕೇಳಬಹುದು. ರೇಷನ್ ಕಾರ್ಡ್, ಪಾಸ್‌ಪೋರ್ಟ್. ವೋಟರ್ ಐಡಿ, ಆಧಾರ್ ಕಾರ್ಡ್ – ಇವುಗಳಲ್ಲಿ ಯಾವುದಾದ್ರೂ ಆಗುತ್ತೆ. ಇದ್ದರೆತಾನೇ ನೀವು ತೋರಿಸೋದು? ಎಲ್ಲಿದೆ? ನೀವು ಇಲ್ಲಿಯವರಾಗಿರದಿದ್ದರೆ, ಎಲ್ಲಿಂದ ಬಂದಿರೋ, ಅಲ್ಲಿಗೆ ಹೋಗಿ. ಅಥವಾ ಅಲ್ಲಿಯ ಐಡಿ ತೋರ್‍ಸಿ, ಅದೂ ನಡೆಯುತ್ತೆ! ಅದಂತೂ ಇರಬೇಕಲ್ವ?'

'ನಾನು ಮನುಷ್ಯ, ಭಾರತದ ನಾಗರಿಕ ಅನ್ನೋ ತಪ್ಪು ತಿಳಿವಳಿಕೆಯಲ್ಲಿ ಇನ್ನೂ ಇದ್ದೀಯ'.

'ಸ್ವಾಮಿ, ನಾವು ದೇವರನ್ನಂತೂ ಭಾರತದ ನಾಗರಿಕನೆಂದೇ ತಿಳೀತೇವೆ! ಯಾವುದಾದ್ರು ಕಾರ್ಡ್ ತೋರ್‍ಸಿ, ನೀವು ದೇವರು ಅನ್ನೋದಕ್ಕೆ'.

'ನಾನು ಈ ಭೂಲೋಕದಿಂದ ವಾಪಸ್ ಹೋಗ್ಬೇಕು ಅಂತ ನೀನು ಬಯಸುತ್ತಿದ್ದೀಯ?'

'ಐಡಿ ಕಾರ್ಡ್ ತೋರಿಸದಿದ್ದರೆ ನಾನೀಗ ನಿಮ್ಮನ್ನು ಇಲ್ಲಿಂದ ಹೋಗಲೂ ಬಿಡಲ್ಲ'.



'ದೇವರಿಗೆ ಎಲ್ಲೂ, ಯಾವ ಐಡಿ ಬೇಕಾಗಿಲ್ಲ. ಭಕ್ತ ದೇವಸ್ಥಾನಕ್ಕೆ ಹೋದರೆ, ನಮಸ್ಕಾರ ಮಾಡುವುದಕ್ಕೂ ಮೊದಲು, ಕೃಷ್ಣ ಅಥವಾ ರಾಮನಿಗೆ, – ಸಾರ್, ನಿಮ್ಮ ದೇವರಲೀಲೆಯ ಐಡಿ ಕಾರ್ಡ್ ತೋರ್‍ಸಿ, ಆಮೇಲೆ ನಾನು ನಮಸ್ಕಾರ ಮಾಡ್ತೀನಿ ಅಂತ ಹೇಳ್ತಾನಾ?'

'ಅವರ ವಿಷಯ ಬಿಡು. ಮನುಷ್ಯ ಖುದ್ದಾಗಿ ದೇವರ ದರ್ಶನ ಪಡೆಯಲು ದೇವಸ್ಥಾನಕ್ಕೆ ಹೋಗಬೇಕಾಗುತ್ತೆ, ನಿಮ್ಮ ಹಾಗೆ ಅವನೇ ದರ್ಶನ ಕೊಡಲು ಬರಲ್ಲ! ಅವನಲ್ಲಿ ಮತ್ತು ನಿಮ್ಮಲ್ಲಿ ತುಂಬಾ ವ್ಯತ್ಯಾಸವಿದೆ. ಅದಕ್ಕೇ ಆಗ್ಲಿಂದ ಐಡಿ ಕಾರ್ಡ್ ಕೇಳ್ತಿದ್ದೀನಿ. ನೀವು ಕೇಳ್ತಲೇ ಇಲ್ಲ'.

'ನೀನು ನನ್ನ ಐಡಿ ಕಾರ್ಡ್ ನೋಡ್ಬೇಕಾ? ನನ್ನ ಐಡಿ ತೋರಿಸ್ತೀನಿ. ತಡಿ, ನಾನು ನಿನಗೆ ನನ್ನ ವಿಶ್ವರೂಪ ತೋರಿಸ್ತೀನಿ, ಆಗ ನಾನು ದೇವರೆಂಬುದನ್ನು ಒಪ್ಪಿಕೊಳ್ತೀಯ'.

'ಖಂಡಿತ ಒಪ್ಪಿಕೊಳ್ತೀನಿ, ಮೊದಲು ವಿಶ್ವರೂಪ ತೋರ್‍ಸಿ. ಆಮೇಲೆ ನೀವು ಶ್ರೇಷ್ಠ ಜಾದುಗಾರರೋ ಅಥವಾ ನಿಜವಾಗಿಯೂ ದೇವರೋ ಎಂಬುದನ್ನು ನಿರ್ಧರಿಸುತ್ತೇನೆ'.

'ನಿನಗೆ ನನ್ನ ಮೇಲೆ ಸ್ವಲ್ಪವೂ ನಂಬಿಕೆ ಇಲ್ಲದಿದ್ದ ಮೇಲೆ, ವಿಶ್ವರೂಪ ಯಾಕೆ ತೋರಿಸಲಿ? ನಾನು ನಿನ್ನ ಹಾಗೆ ಮೂರ್ಖನೇ?'

'ನಿಮ್ಮ ವಿಶ್ವರೂಪ ನೋಡಿ ನನಗೆ ನಿಮ್ಮ ಬಗ್ಗೆ ಶ್ರದ್ಧೆ, ಭಕ್ತಿ ಮೂಡಬಹುದೇನೋ?'.

'ಹೋಗ್ಲಿ ಬಿಡು, ವಿಶ್ವರೂಪ ನೋಡಿದರೆ ನೀನು ಹೆದರಿಬಿಡ್ತೀಯ! ಅಕಸ್ಮಾತ್ ಹೃದಯಾಘಾತವಾದರೆ, ನಿನ್ನ ಜೀವಕ್ಕೆ ಅಪಾಯವಾಗುತ್ತೆ'.

'ನೀವು ಎಲ್ಲದಕ್ಕೂ ಹಿಂದೆ ಸರೀತೀರ. ಮತ್ತೆ ನಾನು ದೇವರು ಅಂತ ಹೇಳ್ತೀರ. ನೀವು ಆಸಾರಾಮ್ ಅಥವಾ ರಜನೀಶ್ ಟೈಪ್ ದೇವರಲ್ಲ ತಾನೇ?'

'ನನ್ನ ಹತ್ರ ತಮಾಷೆ ಮಾಡ್ತೀಯ, ಮೂರ್ಖ? ಅವರ ಜೊತೆಗೆ ನನ್ನನ್ನು ಹೋಲಿಕೆ ಮಾಡ್ತೀಯಾ? ಒಂದಲ್ಲ ಒಂದು ದಿನ ನೀನು ಮೇಲೆ ಬಂದೇ ಬರ್‍ತೀಯ. ಇನ್ನೆಲ್ಲಿಗೆ ಹೋಗ್ತೀಯಾ? ಅಲ್ಲಿ ನಿನ್ನಿಡೀ ಲೆಕ್ಕಾಚಾರ ಮಾಡ್ತೀನಿ. ನೀನು ನರಕಕ್ಕೇ ಹೋಗ್ತೀಯ, ನರಕಕ್ಕೇ...'

'ನಾನು ಮೇಲೆ–ಕೆಳಗೆ ಹೋಗೋನಲ್ಲ, ಸ್ವರ್ಗ–ನರಕಕ್ಕೂ ಹೋಗೋನಲ್ಲ. ಸತ್ತಮೇಲೂ ಈ ಮಣ್ಣಿನಲ್ಲೇ ಮಣ್ಣಾಗ್ತೀನಿ. ನಿಮ್ಮ ಹತ್ರ ಶಕ್ತಿ ಇದ್ದರೆ ಹೀಗೇ ಜೀವಂತವಾಗಿ ನನ್ನನ್ನು ಕರೆದುಕೊಂಡು ಹೋಗಿ. ನಾನು ಬರಲು ಸಿದ್ಧ'.

'ಮತ್ತೆ ತಮಾಷೆ? ನಿನಗೆ ಇನ್ನೇನೂ ಬರಲ್ವ?'

'ಇದರಲ್ಲೇನು ತಮಾಷೆ ಇದೆ? ನೀವು ದೇವರಾಗಿದ್ದರೆ ಏನೆಲ್ಲಾ ಮಾಡಬಹುದಲ್ವ?'

'ನೋಡು, ನೀನು ಬೆಂಕಿಯೊಂದಿಗೆ ಸರಸವಾಡ್ತಿದ್ದೀಯ!'

'ನನಗೆ ಹೀಗೆ ಅನ್ನಿಸಲ್ಲ'.

'ಈಗ್ಲೇ ಅನ್ನಿಸುತ್ತೆ, ತಡಿ'.

'ನೋಡೋಣ?'

'ನಿಜವಾಗ಼್ೂ?'

'ಹೌದು. ನಾನು ಎಷ್ಟು ಹೊತ್ತಿನಿಂದ ಹೇಳ್ತಿದ್ದೀನಿ, ಇನ್ನೆಷ್ಟು ಸಲ ಹೇಳ್ಲಿ?'

'ಹೋಗ್ಲಿ, ನಿನ್ನನ್ನು ಕ್ಷಮಿಸಿದೆ. ದೊಡ್ಡವರು ಕ್ಷಮಾಗುಣ ತೋರಬೇಕು...'

'ಮತ್ತೆ ಕ್ಷಮೆ? ದಯೆ?'

'ಹೋಗು ಹೋಗು... ನಿನ್ನ ಹತ್ರ ಯಾರು ವಾದ ಮಾಡ್ತಾರೆ? ಎಷ್ಟೂಂತ ವಾದ ಮಾಡೋದು? ಟಾ ಟಾ, ಬೈ ಬೈ!'

ನಂತರ ನನಗೆಚ್ಚರವಾಯಿತು. ನೀವೀಗ ಓದಿದ್ದು ನನ್ನ ಶುದ್ಧ ಕನಸಿನ ವಿವರಣೆಯಾಗಿದೆ, ಇದಕ್ಕೆ ಉಪ್ಪು ಖಾರ ಹಚ್ಚಿಲ್ಲ. ಇದನ್ನು ನಾನು ಎದ್ದ ಕೂಡಲೇ ಬ್ರಶ್ ಮಾಡದೆ, ಲೆಟ್ರಿನ್‌ಗೆ ಹೋಗದೆ ಬರೆದಿದ್ದೆ. ಆದರೂ ಯಾರ ಭಾವನೆಗಾದರೂ ನೋವಾಗಿದ್ದರೆ ಕ್ಷಮೆಯಾಚಿಸುವೆ.

ಪ್ರತಿಕ್ರಿಯಿಸಿ: **feedback@sudha.co.in**